ಶ್ರೀ ಎರ್. ಎಸ್. ನಾಯಕ್.—ಸ್ವಾಮಿ, ಬೆಳಗಾಂ ಜಿಲ್ಲೆಯಲ್ಲಿ ಸಾಧಾರಣವಾಗಿ 40 ವರ್ಷ ಗಳಿಂದಲೂ ರೈತರು ಜಮೀನನ್ನು ಸಾಗುವಳಿ ಮಾಡುತ್ತಾ ಬಂದಿರುವುದರಿಂದ ಅವುಗಳನ್ನು ಅರಣ್ಯೇತರ ಭೂಮಿಗಳಾಗಿ ಪರಿವರ್ತಿಸಿ ಅವರಿಗೇ ಆ ಭೂಮಿಗಳನ್ನು ಖಾಯಂ ಆಗಿ ಕೊಡಲಾಗುವುದೇ ಎಂದು ಕೇಳಿದ್ದಕ್ಕೆ ಸಾಮಾನ್ಯವಾಗಿ ಹಾಗಿಲ್ಲ ಎಂದು ಹೇಳಿದ್ದೀರಿ, ಹಿಂದೆ ಮುಂಬೈ ಸರ್ಕಾರದವರು 12 ವರ್ಷ ನಿರಂತರವಾಗಿ ಯಾರ ಕಡೆ ಜಮೀನು ಇರುತ್ತದೆಯೋ ಅದನ್ನು ಬಿಡಿಸುವುದಕ್ಕೆ ಬರುವುದಿಲ್ಲ ಎಂದು ಒಂದು ಕಾಯಿದೆ ಮಾಡಿದ್ದಾರೆ. ಆ ಪ್ರಕಾರ ಇವರಿಗೂ ಕೊಡುತ್ತೀರಾ ?

†ಶ್ರೀ ಆಲೂರು ಹನುಮಂತಪ್ಪ.—ಮೈಸೂರು ಕಾಯಿದೆ ಪ್ರಕಾರ ಈಗ ಅಲ್ಲಿರತಕ್ಕ ವ್ಯವಸ್ಥೆ ಹಂಗಾಮಿಯಾಗಿ ಸಾಗುವಳಿ ಮಾಡಿ ಆ ಜಮೀನು ಅನುಭವಿಸುತ್ತಿರುವುದು.

ಶ್ರೀ ಎರ್. ಎಸ್. ನಾಯಕ್.—ಈಗ ಕೆಲವು ಫಾರೆಸ್ಟ್ ಅಧಿಕಾರಿಗಳು ರೈತರಿಗೆ ದಂಡ ಹಾಕಿ ಅದನ್ನು ವಸೂಲು ಮಾಡುತ್ತಿದ್ದಾರೆ. ಆದ್ದರಿಂದ ಅವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅವರಿಗೆ ಲೀಜ್ ಅಮೌಂಟನ್ನು ಫಿಕ್ಸ್ ಮಾಡುತ್ತಾರೆ, ಆ ಪ್ರಕಾರ ಇವರು ವಸೂಲು ಮಾಡುತ್ತಾರೆ.

ಶ್ರೀ ಎ. ಆರ್. ಪಂಚಗಾವಿ.—ವರ್ಷೇ ವರ್ಷೇ ರಾವಣ ಫೀಜು ಕೊಡಬೇಕೆಂದು ಫಾರೆಸ್ಟ್ ಅಧಿಕಾರಿಗಳು ರೈತರಿಗೆ ಹೆರಾಸ್ ಮಾಡುತ್ತಿದ್ದಾರೆ, ಇದನ್ನು ತಪ್ಪಿಸುವುದಕ್ಕೆ ಏನು ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಅವರು ಲೀಜ್ ಬೇಸಿಸ್ ಮೇರೆ ಜಮೀನು ಮಾಡಿಕೊಂಡು ಬರುತ್ತಿದ್ದಾರೆ. ಇದು 1926ನೇ ಇಸವಿಯಿಂದಲೂ ನಡೆದುಕೊಂಡು ಬರುತ್ತಿದೆ. ಇದು ದಂಡ ಹಾಕುವ ಪ್ರಶ್ನೆಯಲ್ಲ. ಇಷ್ಟು ಲೀಜ್ ಅಮೌಂಟ್ ಕೊಡಬೇಕೆಂದು ಫಿಕ್ಸ್ ಮಾಡುತ್ತಾರೆ. ಆ ಪ್ರಕಾರ ವಸೂಲು ಮಾಡುತ್ತಾರೆ. ಈ ವಿಚಾರದಲ್ಲಿ ರೈತರಿಗೆ ಹೆರಾಸ್‌ಮೆಂಟ್ ಆಗುತ್ತಿದ್ದರೆ ಅದನ್ನು ವಿಚಾರ ಮಾಡುತ್ತೇವೆ.

## Technical Clearance to Hemavathy and other Projects

485. **Sri H. N. NANJE GOWDA** (Arkalgud).—

Will the Chief Minister be pleased to state :—

(*a*) whether the Government of India has given technical clearance to Mysore Projects like Kabini, Hemavathi, Harangi, Kambadakada ;

(*b*) if so, the details ;

(*c*) if not, the reasons for the same ?

**Sri VEERENDRA PATIL** (Chief Minister).—

(*a*) The Kabini Project was approved by the Government of India in April 1958. Clearance for Hemavathi, Harangi and Cauvery Reservoir Projects (Kambadakada) are still awaited from the Government of India.

(*b*) The Kabini Project estimated to cost Rs. 2.5 crores and envisaging irrigation of 30,000 acres was approved.

(*c*) The Government of India had made certain observations regarding Hemavathi Project. These have been replied to and the technical clearance is awaited.

Sri H. N. NANJE GOWDA.—I am yet to understand the answer. It is stated here that the Kabini Project was approved by the Government of India in April 1958. May I know whether we are continuing the same project or is there any difference in estimate and whether that is being approved?

†Sri VEERENDRA PATIL.—It is the original project that was approved by the Central Water and Power Commission. Later on the project was revised and approval for the revised project is not received from the Central Water and Power Commission.

Sri H. N. NANJE GOWDA.—Is it a fact that the Government of India have sought the advice and concurrence of the Government of Madras in this matter?

Sri VEERENDRA PATIL.—I do not know whom they are consulting. But it is a fact that they have not yet accorded technical clearance to the revised project.

Sri H. N. NANJE GOWDA.—Do the Government feel it proper to demand an explanation from the Government of India for their discrimination in according technical clearance to our projects, because they have accorded clearance to projects undertaken by Tamil Nadu which are constructed outside the agreement whereas the projects undertaken by Mysore are within the agreement?

Sri VEERENDRA PATIL.—We have been in correspondence with the Government of India and the C.P.W.C. I do not think it is fair on our part to demand an explanation from the Government of India. What we want is technical clearance from the C.P.W.C. We are not waiting for the technical clearance. The works are going on.

Sri C. K. RAJAIAH SHETTY.—May I know whether the size of the dam is revised or whether only estimate is revised?

Sri VEERENDRA PATIL.—The scope of the project itself is revised.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಿದ್ದುಪಡಿಯಾದ ಮೇಲೆ ಎಷ್ಟು ಎಕರೆಗೆ ನೀರಾವರಿ ಯಾಗುತ್ತದೆ. ಈಗಿನ ಅಂದಾಜು ಪೊಬಲಗು ಎಷ್ಟು, ಇದುವರೆಗೆ ಎಷ್ಟು ಖರ್ಚಾಗಿದೆ ಮತ್ತು ತಿದ್ದುಪಡಿ ಅಂದಾಜನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿದ್ದು ಯಾವಾಗ?

ಶ್ರೀ ವೀರೇಂದ್ರ ಪಾಟೀಲ್.—ರಿವೈಸ್ಡ್ ಎಸ್ಟಿಮೇಟ್ ಕಾಸ್ಟ್ 24 ಕೋಟಿ 80 ಲಕ್ಷ ರೂಪಾಯಿಗಳು. ಎಷ್ಟು ಏರಿಯಾಕ್ಕೆ ನೀರಾವರಿಯಾಗುತ್ತದೆ ಎಂಬುದನ್ನು ಹಿಂದೆ ಹೇಳಿದ್ದೇನೆ. ಆ ವಿವರ ಈಗ ಇಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೇಂದ್ರ ಸರ್ಕಾರಕ್ಕೆ ಕಳಿಸಿದ್ದು ಯಾವಾಗ?

ಶ್ರೀ ವೀರೇಂದ್ರ ಪಾಟೀಲ್.—ಆ ವಿವರ ಇಲ್ಲ.

ಶ್ರೀ ಎಂ. ಎ. ಚನ್ನೇಗೌಡ.—ಟೆಕ್ನಿಕಲ್ ಸ್ಯಾಂಕ್ಷನ್‌ಗಾಗಿ ತಾವು ಕೇಂದ್ರ ಸರ್ಕಾರಕ್ಕೆ ಬರೆದು ಅವರ ಅನುಮತಿಗಾಗಿ ಎಷ್ಟಕ್ಕೆ ಕಾಯಬೇಕು? ಈಗ ಮದ್ರಾಸ್ ಮತ್ತು ಆಂಧ್ರ ದವರು ಅನುಮತಿ ಇಲ್ಲದೆ ಯೋಜನೆಗಳನ್ನು ಕಟ್ಟಿ ಮುಗಿಸುತ್ತಿಲ್ಲವೆ?

ಶ್ರೀ ವೀರೇಂದ್ರ ಪಾಟೀಲ್.—ಇದೀಗ ಹೇಳಿದೆ, ಟೆಕ್ನಿಕಲ್ ಸ್ಯಾಂಕ್ಷನ್ ಬರುವುದು ಬರುತ್ತದೆ. ಅದನ್ನು ಕಾಯುತ್ತಿಲ್ಲ. ಕೆಲಸ ಪ್ರಾರಂಭ ಮಾಡಿದ್ದೇವೆ. ಕೆಲಸವನ್ನು ಮುಂದುವರಿಸುತ್ತೇವೆಂದು ಹೇಳಿದ್ದೇನೆ.